

ಚಿತ್ರ: ದಿಲ್



# ಚಿತ್ರ-ಸಂತೆಯಲ್ಲಿ ಮೀನು ಮಾರುವ ಹುಡುಗ!

■ ದಿಲ್

ಬೆಂಗಳೂರಿನ ಚಿತ್ರಕಲಾಪರಿಷತ್ ಪ್ರತಿ ವರ್ಷ ನಡೆಸುವ ಚಿತ್ರ ಸಂತೆ ಈ ಬಾರಿಯೂ ಭರ್ಜರಿಯಾಗಿತ್ತು. ಯಾರ್‍ಯಾರು ಏನೇನು, ಎಷ್ಟೆಷ್ಟು ಮಾರಿಕೊಂಡರೋ? ಅಂತೂ ಕೋಟಿ ರೂಪಾಯಿಗೂ ಮೀರಿ ವಹಿವಾಟು ನಡೆದದ್ದು ಮಾತ್ರ ಸುದ್ದಿಯಾಯ್ತು.

ಚಿತ್ರಸಂತೆಯ ಆರಂಭದ ಅಂಗಡಿಯೇ ತರಕಾರಿ ಹೆಚ್ಚುವ ಪರಿಕರದ್ದಾಗಿತ್ತು. ಚಿತ್ರ ನೋಡಲೆಂದೇ ಬಂದ ಹೆಂಗಸರು 'ಅವ್ವೀ... ಏಟು ಚಂದಾದೆ ತರಕಾರಿ ಹೆಚ್ಚುವ ವಸ್ತು!' ಎಂದುಕೊಂಡು ಅಂಗಡಿ ಸುತ್ತ ಜಮಾಯಿಸಿದ್ದು ತುಂಬ ಚಂದ ಕಾಣಿಸುತ್ತಿತ್ತು.

ಇಲ್ಲಿ ಚಿತ್ರದ ಹೆಸರಲ್ಲಿ ಏನೆಲ್ಲ ಮಾರಾಟಕ್ಕಿಳಿದಿದ್ದರು. ಹಾಗೆ ಒಬ್ಬ ಮೀನು ಮಾರುವವ ಕೂಡ ನನ್ನ ಕಣ್ಣಿಗೆ ಬಿದ್ದ. ವ್ಹಾ! ಎಂತೆಂಥ ಮೀನುಗಳು! ಬಾಯಲ್ಲಿ ಅರಬ್ಬೀ ಸಮುದ್ರವೇ ಉಕ್ಕಿ ಬಂದಂತಾಗಿತ್ತು.

ಅಲ್ಲೆಲ್ಲ ಅಬ್‌ಸ್ಟ್ರ್ಯಾಕ್ಟ್, ರಿಯಲಿಸ್ಟಿಕ್ ಪೇಂಟಿಂಗ್, ಟ್ರ್ಯಾಡಿಷನಲ್ ಪೇಂಟಿಂಗ್, ಗಣಪತಿ, ವೆಂಕಟೇಶ, ಸಾಯಿಬಾಬಾ, ಶಿವ, ಪಾರ್ವತಿ.. ಚಿತ್ರಗಳ ಮಾರಾಟ ಮಾಡುತ್ತಿದ್ದವರ ನಡುವೆ ಈ ಮೀನು ಮಾರುವ ಹುಡುಗ ನಿಂತಿದ್ದ. ತುಂಬ ಇಂಟರೆಸ್ಟಿಂಗ್ ಅನಿಸುತ್ತಿದ್ದ.

(8ನೇ ಪುಟ ನೋಡಿ)